**International Journal of Research in Economics and Social Sciences(IJRESS)**
Available online at http://euroasiapub.org/journals.php
Vol. 6 Issue 11, November 2016
ISSN: 2249-7382 Impact Factor: 6.225 | Thomson Reuters ID: L-5236-2015

# Internal Confession of Women in Vachana Sahitya : With reference to Vachanas of Akkamahadevi

**Dr B.N. Sharada**

## ವಚನ ಸಾಹಿತ್ಯದಲ್ಲಿ ಸ್ತ್ರೀ ಅಂತರಂಗದ ನಿವೇದನೆ: ಅಕ್ಕನ ವಚನಗಳನ್ನು ಅನುಲಕ್ಷಿಸಿ

**ಡಾ.ಬಿ.ಎನ್.ಶಾರದ**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಬಾಲಕರ ಕಾಲೇಜು, ಕೋಲಾರ

ಕರ್ಮಕೌಶಲವೇ ಕಾವ್ಯವಾಗಿರುವ ಪರಿ ವಚನಗಳದ್ದು. ಅದು ಭವರೋಗ ನಿವಾರಕ, ಆತ್ಮಶಕ್ತಿವರ್ಧಕ. ಅದರ ಅಮೃತತ್ತ್ವ ಅದರಕ್ಕೆ ಕಹಿ ಉದರಕ್ಕೆ ಸಿಹಿಯಂತೆ ಕಠೋರ ಸತ್ಯಗಳ ನಿಧಿ. ಶಿವ ಶರಣರ ವಚನಗಳು ಕಡಲಿನಷ್ಟು ಇದ್ದರೂ ಈ ಕಾಲಕ್ಕೆ ನಮಗೆ ಲಭ್ಯವಿರುವುದು ಕುಡಿತೆಯಷ್ಟು ಮಾತ್ರ. ವಚನಗಳು ಅಮಿತ ರಚನೆಯಾಗಿದ್ದರೂ ಮಿತ ಲಭ್ಯತೆಯ ಕಾರಣದಿಂದ ಆನೆಯ ಹಿಂಡು ಕಣ್ಮರೆಯಾಗಿ ಅದರ ಹೆಜ್ಜೆ ಗುರುತು ಮಾತ್ರ ಉಳಿದಂತೆ ಅನಿಸುತ್ತಿದೆ. ಚೆನ್ನಬಸವಣ್ಣನವರು  ವಚನಗಳ ಮಹತ್ವವನ್ನು ಈ ರೀತಿ ಹೇಳಿದ್ದಾರೆ. “ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ, ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,  ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ, ಅಜಗಣ್ಣನ ಐದು ವಚನಕ್ಕೆ ಕೂಡಲ ಚೆನ್ನ ಸಂಗಯ್ಯನಲ್ಲಿ ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯ” ಎಂದು. ಇದರಿಂದ ಅಕ್ಕನ ವಚನಗಳಿಗೆ ವರಿಷ್ಠ ಮೌಲ್ಯವಿರುವುದನ್ನು ಗುರುತಿಸಬಹುದು. ಸಾರ ಸಂಗ್ರಹತೆ, ಸೂಚ್ಯ, ಸೂಕ್ಷ್ಮ ವಿಧಾನ, ಭಾವಗೀತೆಯ ಭಾವತೀವ್ರತೆ, ವಸ್ತುವಿನ ಏಕಮುಖತೆ, ವ್ಯಕ್ತಿನಿಷ್ಠತೆ ಇವರ ವಚನಗಳಲ್ಲಿ ಕಂಡುಬರುತ್ತದೆ. ದೊರೆತ ಅತ್ಯಲ್ಪ ವಚನಗಳಲ್ಲೇ ಆಕೆಯ ಸೇವ್ಯ-ಕಾವ್ಯ-ಅಲಂಕಾರಗಳು, ಭವ್ಯತೆ ಕಾಣುತ್ತದೆ. ಕಿರಿಯ ವಯಸ್ಸಿನ ಅಕ್ಕನ ವಾಕ್ ಸತ್ವ, ಆಧ್ಯಾತ್ಮಿಕ ಸಿದ್ಧಿಯನ್ನು ಕುರಿತು ಭಾವ ಪರವಶತೆಯಿಂದ ಚೆನ್ನ ಬಸವಣ್ಣ “ಅನುವನರಿದು ಘನವ ಬೆರೆಸಿ ಹಿರಿದು ಕಿರಿದೆಂಬ ಭೇದವ ಮರೆದು ಕೂಡಲಚೆನ್ನಸಂಗಯ್ಯನಲ್ಲಿ ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು ಕೇಳಾ ಪ್ರಭುವೇ,’ ಎಂದಿದ್ದಾರೆ.

ಅನೇಕ ರಾಜಕೀಯ, ಧಾರ್ಮಿಕ ಕಾರಣಗಳಿಂದ ವಚನಗಳು ನಾಶವಾಗಿದ್ದರೂ ಉಪಲಬ್ಧವಿರುವುದರಲ್ಲಿ ಹರಿಹರನು ಬರೆದಿರುವ “ಉಡುತಡಿಯ ಮಹಾದೇವಿಯಕ್ಕಗಳ ರಗಳೆ” ಯಲ್ಲಿ ಅನೇಕ ವಚನಗಳು ಲಭ್ಯವಿದೆ. ೧೫ನೇ ಶತಮಾನದ ವಿಜಯನಗರದ ಪ್ರೌಢದೇವರಾಯನ ಕಾಲದ ಮಹಲಿಂಗನ “ಏಕೋತ್ತರ ಶತಸ್ಥಲ”ದಲ್ಲಿ ಹಲವು ವಚನಗಳು, ಒಂದೆರಡು ಹಾಡುಗಳು ಉಲ್ಲೇಖಿತವಾಗಿದೆ. ಶಿವಗಣ ಪ್ರಸಾದಿಯವರ ಶೂನ್ಯ ಸಂಪಾದನೆಯಲ್ಲಿ ಅಕ್ಕನ ೧೩ ವಚನಗಳಿವೆ. ಚೆನ್ನ ಬಸವಾಂಕನ ಮಹಾದೇವಿಯಕ್ಕನ ಪುರಾಣದಲ್ಲಿ ಸುಮಾರು ೨೫ ವಚನಗಳಿವೆ. ರಾಚಯ್ಯನ ‘ಮಹಾದೇವಿಯಕ್ಕನ ಸಾಂಗತ್ಯ’ದಲ್ಲಿ ೭ ವಚನಗಳು, ‘ಬೆಡಗಿನ ಸ್ವರ ಪದಗಳು’, ‘ವಚನಸಾರ’ದಲ್ಲಿ

ಕೆಲವು ವಚನಗಳು ಲಭ್ಯವಿದೆ. ಇವುಗಳ ಹಿನ್ನಲೆಯಲ್ಲಿ ಆಕೆಯ ಚಿಂತನೆಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು.

ಅಕ್ಕನದು ಒಂದು ಸಾಂಸ್ಕೃತಿಕ ಮುಖಾಮುಖಿ ಮತ್ತೊಂದು ಸಾಮಾಜಿಕ ಮುಖಾಮುಖಿ. ಆಕೆಯದು ಯಾವುದೇ ಕಾಲದ ಎಷ್ಟೇ ಕಠಿಣವಾದ ಸವಾಲುಗಳನ್ನು ಎದುರಿಸಬಲ್ಲ ವ್ಯಕ್ತಿತ್ವ. ಡಾ. ಕುರ್ತುಕೋಟಿಯವರ ಪ್ರಕಾರ ಅಕ್ಕನದು ಅಭಿಜಾತವಾದ, ಸ್ವೋಪಜ್ಞವಾದ ವ್ಯಕ್ತಿತ್ವ. ತನ್ನ ಕಾಲದ ವಚನಕಾರರ ಸಾಮಾಜಿಕ ಚಳುವಳಿಗಿಂತ ಭಿನ್ನವಾದ ತಾನು ವೈಯಕ್ತಿಕವಾಗಿ ಎದುರಿಸುತ್ತಿರುವ ಸಮಸ್ಯೆಗಳ ಪ್ರಸ್ತಾಪ ಅವರ ವಚನಗಳಲ್ಲಿ ಹೆಚ್ಚು ಬರುತ್ತದೆ. ಆಕೆ ತನ್ನನ್ನು ತಾನು ಆ ಕಾಲದ ಮಹಿಳೆಯರ ಪ್ರತಿನಿಧಿಯಾಗಿ, ಹೆಣ್ಣಿನ ಬಿಡುಗಡೆಯ ಹೋರಾಟವಾಗದೆ, ಅವಳ ನಿರ್ಭೀತ ನಿಲುವು ವ್ಯಯಕ್ತಿಕ ಸಾಧನೆಯ ಪ್ರಯತ್ನವೆನಿಸುತ್ತದೆ. ೧೨ನೇ ಶತಮಾನದಲ್ಲಿ ಭವಿಯೆಂದು ಭಾವಿಸಿದ್ದ ಹೆಣ್ಣಿಗೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಮಾನ ಹಕ್ಕು ಸಿಕ್ಕಿದ್ದು ಗಮನಾರ್ಹ. ಇದರಿಂದ ವ್ಯಕ್ತಿತ್ವದ ಸ್ವೀಕಾರ ಹಾಗು ಆಯ್ಕೆಯ ಬದುಕಿಗೆ ಅಕ್ಕ ತೆರೆದುಕೊಳ್ಳುವಂತಾದದ್ದು ಎಂಬ ನಿಲುವುಗಳಿವೆ. ಆದರೆ ಆ ಕಾಲಘಟ್ಟದ ಚಳವಳಿ ಜಾತಿ ಹಿನ್ನಲೆಯದ್ದಾಗಿದ್ದು, ಸ್ತ್ರೀಯನ್ನು ಕುರಿತಂತೆ ಅದರ ಹೋರಾಟ ಸ್ಪಷ್ಟವಾಗಿರಲಿಲ್ಲ. ಹಾಗಾಗಿ ಅಕ್ಕ ಆ ಹೋರಾಟದ ಫಲವಲ್ಲ, ಆಕೆಯದು ವೈಯಕ್ತಿಕ ಹೋರಾಟ ಹಾಗೂ ಸಾಧನೆ, ಎಂದು ಡಾ. ಎಂ.ಎಸ್. ಆಶಾದೇವಿ ಅವರು ಭಾವಿಸುತ್ತಾರೆ. ೧೨ನೇ ಶತಮಾನದ ಕ್ರಾಂತಿಯ ಹರಿಕಾರರಾದ ಬಸವಣ್ಣನವರಿಗೆ ಹೆಣ್ಣಿನ ಬಗ್ಗೆ ಇದ್ದುದು ಸಾಂಪ್ರದಾಯಿಕ ನಿಲುವು. ಪತಿಗೆ ಅನುಕೂಲೆಯಾದ, ದಾಂಪತ್ಯದ ಕರಾರುಗಳಿಗೆ ಒಳಪಡುವವಳು.

ಆಕೆ ಮಾಯೆ, ಕರ್ಮದ ಬಲೆ. ಮೋಕ್ಷಕ್ಕೆ ಪ್ರತಿಬಂಧಕಳು ಎಂಬ ಅರ್ಥ ಅವರ ಅನೇಕ ವಚನಗಳಿಂದ ಹೊಮ್ಮುತ್ತದೆ. ಆದರೆ ಅಕ್ಕ ಅದರ ಆಚೆ ನಿಲ್ಲುವವಳು. ಆಧ್ಯಾತ್ಮ ಅವಳಿಗೆ ಒಂದು ಪ್ರತಿರೋಧದ ನೆಲೆಯಾಗಿತ್ತು. ಅವಳಲ್ಲಿ ಹೆಣ್ತನದ ಸಾಂಪ್ರದಾಯಿಕ ಮಿತಿಯನ್ನು ಮೀರುವ ಹಂಬಲವಿತ್ತು. ಆತ್ಮ ಮರುಕವಾಗಲಿ, ಸ್ವ-ಕರುಣೆಯಾಗಲಿ ಇಲ್ಲದೆ ತಾವು ಪತಿತರು, ದುರ್ಬಲರು ಎಂಬ ಕೀಳರಿಮೆಯಿಲ್ಲದ ಆತ್ಮವಿಶ್ವಾಸ ಅವರ ವಚನಗಳು ಮೂಡಿವೆ. ಅವರಲ್ಲಾದ ಸಂವೇದನೆಯ ಬದಲಾವಣೆ ಅವರಿಗೆ ಸಿಕ್ಕ ಅವಕಾಶಕ್ಕಿಂತ ದೊಡ್ಡದು. ಇತಿಹಾಸದ ರಚನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ನೆಲೆಯದ್ದು.

ಅಕ್ಕ ತನ್ನ ಬದುಕಿಗೆ ಸಂಬಂಧಿಸಿದ ಮೂಲಭೂತ ಪ್ರಶ್ನೆಗಳು, ಅದರೊಟ್ಟಿಗಿನ ತಾತ್ವಿಕ ವೈಚಾರಿಕ ಒತ್ತಡಗಳನ್ನು, ಸ್ವಂತ ಸಾಮರ್ಥ್ಯ, ಸಂವಾದಗಳನ್ನು, ಹುಡುಕಾಟದ ವಿವಿಧ ಮುಖಗಳ ಅನಾವರಣವನ್ನು ಆತ್ಮವಿಶ್ಲೇಷಣೆಯ ಹಿನ್ನಲೆಯಲ್ಲಿ ಗುರುತಿಸಿಕೊಳ್ಳುತ್ತಾಳೆ. ಇದು ಏಕಕಾಲಕ್ಕೆ ಸಮಾಜದ ಹುಡುಕಾಟವೂ, ತನ್ನ ನೆಲೆಯ ಹುಡುಕಾಟವೂ ಆಗಿರುತ್ತದೆ. ಅಕ್ಕನದು ಸೃಜನಶೀಲ ಹುಡುಕಾಟವಾಗಿದ್ದು ಅದರ ಗ್ರಹಿಕೆಗಳು ವ್ಯಕ್ತಿವಿಶಿಷ್ಟವಾದವು. ನಡೆ-ನುಡಿಯ ಐಕ್ಯತೆಯ, ಆತ್ಮಸಾಕ್ಷಿಯ ಮಾತುಗಳಾಗಿ 'ಆತ್ಮಸಾಹಿತ್ಯ' (ಆರ್.ಸಿ.ಹಿರೇಮಠ್) ದಂತೆ ಅಕ್ಕನ ವಚನಗಳಿವೆ. ವಾಚ್ಯವಾಗಿ, ಸೂಚ್ಯವಾಗಿ ಆತ್ಮವಿಮರ್ಶೆಯ ಆಯಾಮಗಳು ತೆರೆದುಕೊಳ್ಳುತ್ತವೆ. ಇವು ಆಂತರಿಕ ಸ್ಥಿತ್ಯಂತರಗಳನ್ನು, ಆತ್ಮೋದ್ಧಾರದ ಹಂತಗಳನ್ನು ಹೇಳುತ್ತದೆ. ತನ್ನ ಕಾಯ, ಮನಸ್ಸು, ಇಂದ್ರಿಯಗಳ ಬಗ್ಗೆ ನಡೆಸುವ ಸೂಕ್ಷ್ಮ ಅವಲೋಕನ

**International Journal of Research in Economics and Social Sciences(IJRESS)**
Available online at http://euroasiapub.org/journals.php
Vol. 6 Issue 11, November 2016
ISSN: 2249-7382 Impact Factor: 6.225 | Thomson Reuters ID: L-5236-2015

ವಚನಗಳಲ್ಲಿವೆ. ಇದರೊಟ್ಟಿಗೆ ಸಂಸಾರ, ಗಂಡ, ಕುಟುಂಬ, ಅದರ ಸ್ವರೂಪಗಳ ಬಗ್ಗೆ ಮಾತನಾಡುತ್ತಾಳೆ. ಅಂದಿನ ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವಿರದಿದ್ದ ಕಾರಣ ಅದರ ವಿರುದ್ಧ ಬಂಡೆದ್ದು ತನ್ನ ನೆಲೆಗಳ ಹುಡುಕಾಟಕ್ಕೆ ತೊಡಗುವುದು 'ಅತ್ತೆ ಮಾಯೆ, ಮಾವ ಸಂಸಾರಿ. ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನು ಶಿವನೊಡನೆ ವರ ಚೆಲುವ ಶ್ರೀಶೈಲ ಮಲ್ಲಿಕಾರ್ಜುನನ ಸಜ್ಜನದ ಗಂಡನ ಮಾಡಿಕೊಂಡೆ' ಎಂಬ ವಚನವು ಹೇಳುತ್ತದೆ.

ಅಜ್ಞಾನದಿಂದ ಕೂಡಿದ, ಜಡ್ಡುಗಟ್ಟಿದ ಸಂಪ್ರದಾಯದ ಸಮಾಜದಲ್ಲಿ, ಸುಜ್ಞಾನದ ಬೆಳಕು ಮೂಡಿಸಿ, ಮಹಿಳೆಯರಿಗೆ ಸಾಮಾಜಿಕ ಘನತೆ ಮೂಡಿಸುವ ನಿಟ್ಟನಲ್ಲಿ ಮೂಡಿದ ೧೨ನೇ ಶತಮಾನದ ಕ್ರಾಂತಿ ಮಹಿಳೆಯರಿಗೆ ಹೊಸ ಚೈತನ್ಯ ನೀಡುವುದರೊಂದಿಗೆ ಅರಿವು ಜಾಗೃತಗೊಳಿಸಿ, ಸ್ವಾನುಭವದ ಮೂಲಕ ಸಿದ್ಧಿಗಳಿಸಿ ಸಾರ್ಥಕ ಬದುಕು ನಡೆಸುವಂತೆ ಮಾಡಿತು. ಮಧುರ ಭಕ್ತಿ ಸಾಧಕಿ ಅಕ್ಕ ಈ ಸಾಲಿನಲ್ಲಿ ನಿಲ್ಲುತ್ತಾರೆ. ಪಾರ್ವತಿಯ ಸಾತ್ವಿಕ ಕಳೆಯಿಂದ ಬಳ್ಳಿಗಾವಿಯ ಉಡುತಡಿಯಲ್ಲಿ ಸಾತ್ವಿಕ ಶಿವಭಕ್ತರಾದ ನಿರ್ಮಲ, ಸುಮತಿ ದಂಪತಿಗಳಿಗೆ ಗಿರಿಜೆಯ ವರಪ್ರಸಾದದಿಂದ ಜನಿಸಿದಳು ಎಂಬ ವಿವರಗಳು ಸಿಗುತ್ತವೆ. ಭವಿಯಾದ ಕೌಶಿಕನನ್ನು ವಿವಾಹವಾಗಲು ಆರಂಭದಲ್ಲಿ ಅಸಮ್ಮತಿ ಸೂಚಿಸಿದರೂ ತಂದೆ–ತಾಯಿಯರ ಒಳಿತಿಗಾಗಿ ಆತನನ್ನು ವರಿಸುತ್ತಾಳೆ. ಭವಿಗಳೊಡನೆ ಬಾಳಿದ ಕರಿಕಾಲಮ್ಮೆ, ಹೇರೂರು ಹೆಂಗೂಸು, ವೈಜಕ್ಕಾವ್ವೆ, ಮಾಂಗಾಯಕ್ಕರ ದೃಷ್ಟಾಂತಗಳಿಂದ ಮಹಾದೇವಿ ಕೆಲವು ಶರತ್ತುಗಳಿಗೆ ರಾಜನನ್ನು ಒಡಂಬಡಿಸಿ ವಿವಾಹವಾಗುತ್ತಾಳೆ. ಸದಾ ಶಿವಪೂಜೆಯಲ್ಲಿ ನಿರತಳಾಗಿ 'ದೇವಾ ಎನಗೆ ಭವಿಯ ಸಂಗವೆಂದು ಮಾಣ್ಬುದೆನ್ನ ತಂದೆ, ದೇವ ಬೆರಕೆಯಿಲ್ಲದಚ್ಚು ಬಕುತಿ ಸುಖವದೆಂದು ತಂದೆ' ಎಂದು ಮೊರೆಯಿಡುತ್ತಾಳೆ. ಕೌಶಿಕ ಮಾಡುವ ಮೂರು ತಪ್ಪುಗಳು ಅವಳಿಗೆ ವರದಾನವಾಗಿ 'ಎನ್ನಿಚ್ಛೆ ಸಾರ್ದಿದು, ಭವಿಸಂಗ ಒಳಸಾರ್ದುದು, ವಿರಕ್ತಿ ನಿಮಿರ್ದುದು, ಭಕ್ತಿ ಬೆಳೆದುದು' ಎಂದು ಕೇಶಾಂಬರೆಯಾಗಿ, ಚೆನ್ನಮಲ್ಲಿಕಾರ್ಜುನನನ್ನು ಕರಸ್ಥಲಕ್ಕೆ ಕೊಂಡು ಭಕ್ತಿ, ಜ್ಞಾನ, ವೈರಾಗ್ಯ ಸಾಮ್ರಾಜ್ಯವಾಳುತ್ತಾ, ಪ್ರಾಪಂಚಿಕ ಜೀವನವನ್ನು ತೊರೆದು ಶ್ರೀಶೈಲಕ್ಕೆ ತೆರಳುತ್ತಾಳೆ. ಅಕ್ಕನಿಗೆ ಮದುವೆ ಆಗಿತ್ತು ಎಂದು ಹರಿಹರ, ಚೆನ್ನಬಸವಾಂಕ, ಕೆಂಚವೀರಣ್ಣೊಡೆಯರು ಹೇಳಿದರೆ ಚಾಮರಸ, ವಿರೂಪಾಕ್ಷ ಪಂಡಿತ, ಮುಂತಾದವರು ಮದುವೆಯಾಗಿರಲಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆಕೆಗೆ ವಿವಾಹವೇ ಒಂದು ಸಮಸ್ಯೆಯಾಗಿತ್ತು ಎಂಬುದು ಸತ್ಯ. ಕಪಟ ಭಕ್ತನಂತೆ ಬಂದು ಅಕ್ಕನನ್ನು ಕೌಶಿಕ ಗೋಗರೆದಾಗ, 'ಎಲೆಲೆ ಕೌಶಿಕ ಹೋಗು ನೀನೇಕೆ ನಾನೇಕೆ, ನೆಲನರಿಯೆ ನಿನ್ನೊಡನೆ ಪುದುವಾಳ್ವುದೆನಗೇಕೆ, ತಮವೆತ್ತ ಬೆಳಗೆತ್ತ, ಶಿಖಿಯೆತ್ತ ತಂಪೆತ್ತ, ಭ್ರಮೆಯೆತ್ತ ತಿಳಿವೆತ್ತ' ಎಂದು 'ನಿನ್ನ ಸಂಗಂ ಬೇಡ ಬೇಡೆನಗೆ' ಎನ್ನುತ್ತಾಳೆ. ಪರಮವೈರಾಗ್ಯ ನಿಧಿಯಾದ ಅವಳು 'ಮಲ್ಲಿನಾಥನ ಪರಮ ಕೀರ್ತಿಲತೆಯವ್ವ' ಎಂಬ ಕೀರ್ತಿಗೆ ಪಾತ್ರಳಾಗುತ್ತಾಳೆ, ಎಂದು ಹರಿಹರ ಚಿತ್ರಿಸುತ್ತಾನೆ. ಇವನ ಕಾವ್ಯದಲ್ಲಿ ಅಕ್ಕ ಕಲ್ಯಾಣಕ್ಕೆ ಬರುವ ಪ್ರಸ್ತಾಪವಿಲ್ಲ. ಅವಳು ಕಲ್ಯಾಣಕ್ಕೆ ಬಂದುದಕ್ಕೆ ಅವಳ ಅನೇಕ ವಚನಗಳು ಸಾಕ್ಷಿಯಾಗಿವೆ.

ಅಂತರಂಗದ ಜ್ಞಾನಾಗ್ನಿಯಿಂದ ಕರ್ಮವನ್ನು ಸುಟ್ಟ ಅಕ್ಕ ಕಲ್ಯಾಣಕ್ಕೆ ಬರುತ್ತಾಳೆ. ಆಗ ಅಲ್ಲಮ ಅವಳ ಘನತೆಯನ್ನು ಪ್ರತ್ಯಕ್ಷವಾಗಿ ಎಲ್ಲರಿಗೂ ತೋರಿಸುತ್ತಾನೆ. 'ಚೆನ್ನ ಮಲ್ಲಿಕರ್ಜುನನಲ್ಲದೆ ಮಿಕ್ಕಿಹ

ಪುರುಷರೆನಗೆ ಸಹೋದರರು' ಎನ್ನುವ ಅಕ್ಕನ ಮಾತನ್ನು ಪರೀಕ್ಷಿಸಲು ಕಿನ್ನರಿ ಬೊಮ್ಮಯ್ಯ ಅವಳನ್ನು ತುಡುಕಿ ಹಿಡಿಯಲು ಹೋದಾಗ ಅವಳ ಸರ್ವಾಂಗ ಶಿವತತ್ವಮಯವಾಗಿರುವುದನ್ನು ಕಂಡು ಬೆಚ್ಚಿ ಪಶ್ಚಾತ್ತಾಪ ಪಡುವುದು ಶೂನ್ಯ ಸಂಪಾದನೆಯಲ್ಲಿ ದಾಖಲಾಗಿದೆ. ಆ ಕಾಲಕ್ಕೆ ಲೋಕವೇ ಅವಳ ಭಕ್ತಿಯಿಂದ ಕಂಪಿತವಾಗಿರಬೇಕು. ಘನಕ್ಕೆ ಘನವಾದ, ಅಪಾರ ವೈರಾಗ್ಯ ಮೂರ್ತಿಯಂತಿದ್ದ ಅಕ್ಕ ತನ್ನ ಕಾಲದ ಪರೀಕ್ಷೆಗಳಿಗೆ ಒಡ್ಡಿಕೊಳ್ಳಬೇಕಾದುದು ವಿಪರ್ಯಾಸ. ಆಕೆಗೆ ಕಲ್ಯಾಣದ ಮಹಾಮನೆಯಲ್ಲಿ ಶರಣರ ಒಡನಾಟದಿಂದ ಬದುಕು ಪಾವನವೆನಿಸುತ್ತದೆ. ಅಕ್ಕನ ನಿಲುವನ್ನು ಒರೆಗೆ ಹಚ್ಚಿದ ಬಸವಣ್ಣನವರು 'ರೂಹಿಲ್ಲದಂಗೆ ಒಲಿದವರಿಗೆ ತನುವಿನ ಹಂಗುಂಟೆ? ಮನವಿಲ್ಲದವಂಗೆ ಮೆಚ್ಚಿದವರಿಗೆ ಅಭಿಮಾನದ ಹಂಗುಂಟೆ?ದಿಗಂಬರಂಗೆ ಒಲಿದವರಿಗೆ ಕೌಪೀನದ ಹಂಗುಂಟೆ? ಕೂಡಲಸಂಗಮದೇವಯ್ಯಾ ಮಹಾದೇವಿಯಕ್ಕನೆಂಬ ಭಕ್ತಿಗೆ ಆವ ಹೊರೆಯೂ ಇಲ್ಲ ನೋಡಾ ಪ್ರಭುವೆ' ಎನ್ನುತ್ತಾರೆ. ಅಲ್ಲಮ ಅಕ್ಕನನ್ನು ಅವಳ ಗಂಡನ ಕುರುಹ ಕೇಳಿದಾಗ 'ಚೆನ್ನಮಲ್ಲಿಕಾರ್ಜುನ ಗಂಡನೆನಗೆ, ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೆ' ಎಂದು ಶರಣರ ಮೆಚ್ಚುಗೆಯನ್ನು ಪಡೆಯಬೇಕಾದ ಪರಿಸ್ಥಿತಿ ಅಕ್ಕನದ್ದಾಗಿರುತ್ತದೆ. ಅಲ್ಲಮ 'ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು' ಎನ್ನುತ್ತಾರೆ. ಚೆನ್ನ ಬಸವಣ್ಣ ಅಕ್ಕನ ಹಿರಿತನವನ್ನು ಹೊಗಳಿದರೆ, ಮಡಿವಾಳ ಮಾಚಿತಂದೆ 'ಕಾಮಿಯಾಗಿ ನಿಃಕಾಮಿಯಾದಳು. ಸೀಮೆಯಲ್ಲದ್ದು ನಿಸ್ಸೀಮೆಯಾದಳು. ಭವಿಯ ಸಂಗವ ತೊರೆದು ಭವಬಾಧೆಯ ಹರಿದಳು' ಎಂದು ಸ್ತುತಿಸಿರುವುದು ಆಕಾಲದ ಪುರುಷ ಪ್ರಧಾನ ಸಮಾಜದ ಸಮ್ಮತಿಯ ಪತ್ರ ಒಂದು ಹೆಣ್ಣಿನ ಆಧ್ಯಾತ್ಮಿಕ ಬದುಕಿನ ಪಯಣಕ್ಕೆ ಎಷ್ಟು ಅನಿವಾರ್ಯವಾಗಿತ್ತು ಎಂಬುದನ್ನು ಸೂಚಿಸುತ್ತದೆ. ಆದರೆ ಇಂಥ ಪರೀಕ್ಷೆಗಳನ್ನು ಎದುರಿಸಿ ಗೆಲ್ಲುವ ಅನಿವಾರ್ಯತೆ ಯಾವ ಶರಣನಿಗೂ ಬಂದದ್ದು ಗೋಚರಿಸುವುದಿಲ್ಲ. ಗಂಡು ಎಂಬುದೆ ಒಂದು ಅರ್ಹತೆ . ಹೆಣ್ಣು ಎಂಬುದೇ ಲೋಪ ಎಂದು ಅನಿಸದೇ ಇರದು.

ಇಡೀ ಸೃಷ್ಟಿ ಹೆಣ್ಣಾಗಿ, ಸೃಷ್ಟಿಕರ್ತ ಗಂಡಾಗಿ ಪರಿಭಾವಿಸಿದ ವಚನಕಾರರ ನಿಲುವಿನ ಮುಂದುವರಿದ ರೂಪವಾಗಿ ಅಕ್ಕನಲ್ಲಿ ಸತಿ-ಪತಿ ಭಾವ ಕಾಣುತ್ತದೆ. ಅವಳ ತುಮುಲ ಇತರರಂತದಲ್ಲ. ತನಗೊದಗಿದ ಸಂಸಾರವನ್ನು ತ್ಯಜಿಸಿ, ಅಶಾಂತ ಮನಸ್ಥಿತಿಯಲ್ಲಿ, ವಿರಹದಿಂದ ಪರಿತಪಿಸುವ ಮಾದರಿಯದ್ದು. ತನ್ನ ದೇಹ-ಮನಸ್ಸುಗಳ ಛಿದ್ರತೆ, ಸಹಜ ಬಯಕೆಗಳ ದಮನದ ಹಿನ್ನಲೆಯಲ್ಲಿ ಅವಳ ಹುಡುಕಾಟವಿದೆ. ಲೌಕಿಕ ಬದುಕಿನ ಸಾಂಪ್ರದಾಯಿಕತೆ ಹಾಗೂ ನಶ್ವರತೆಯನ್ನು ಮೀರುವ ಆಶಯ ಅವಳ ವಚನಗಳಲ್ಲಿದೆ. ಅವಳ ವೈಯಕ್ತಿಕ ಶೋಧ ಸಾಮಾಜಿಕ ಶೋಧವೂ ಆಗುತ್ತದೆ. ತನ್ನನ್ನು ತಾನು ವಿಮರ್ಶಿಸಿಕೊಳ್ಳುತ್ತಲೇ ಸಮಾಜದ ವಿಮರ್ಶಕಿಯೂ ಆಗುತ್ತಾಳೆ. ಡಾ. ಹೊನ್ನು ಸಿದ್ಧಾರ್ಥ ಅವರು ಅವಳ ಚಿಂತನೆಗಳು ಮೂರು ಸ್ತರಗಳಲ್ಲಿ ವಿಸ್ತರಿಸುವುದನ್ನು ಗುರುತಿಸುತ್ತಾರೆ. ಅವು. ೧. ಲೌಕಿಕ ಬಂಧನದಿಂದ ಬಿಡುಗಡೆ. ೨. ಅಲೌಕಿಕ ಗಂಡನ ಹುಡುಕಾಟದಲ್ಲಿ ಎದುರಿಸಿದ ಬವಣೆ ೩. ಶಾಶ್ವತ ಗಂಡನೊಡನೆ ಸಮಾಗಮ (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೩, ಪುಟ ೩೮೨). ಮಾಯೆಯಿಂದ ಬಿಡಿಸಿಕೊಳ್ಳಲು ಶಿವನಿಗೇ ಮೊರೆಹೋಗುತ್ತಾಳೆ. 'ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ' ಮಾಯೆಯನ್ನು ಸೃಷ್ಟಿಸಿದಾತನೇ ಅದನ್ನು ನಿವಾರಿಸಬೇಕೆಂದು ಕನಲುತ್ತಾಳೆ. 'ಹರಿಯ ನುಂಗಿತ್ತು ಮಾಯೆ.....ಎನ್ನ ಮಾಯವ ಮಾಣಿಸು ಕರುಣಿ'

**International Journal of Research in Economics and Social Sciences(IJRESS)**
Available online at http://euroasiapub.org/journals.php
Vol. 6 Issue 11, November 2016
ISSN: 2249-7382 Impact Factor: 6.225 | Thomson Reuters ID: L-5236-2015

ಎಂಬಲ್ಲಿ ಜಗತ್ತನ್ನೂ, ತನ್ನ ಮನವನ್ನೂ ಆವರಿಸಿರುವ ಮಾಯೆಯನ್ನು ಹೋಗಲಾಡಿಸಿ ತನ್ನ ಮಾಯೆಯಲ್ಲಿ ತನ್ನನ್ನು ಬಂಧಿಸು ಎನ್ನುತ್ತಾಳೆ. ಲೋಕದ ತೊಳಲಾಟಕ್ಕೆ ಸಿಕ್ಕ ತಾನು 'ಅಕಟಕಟಾ ಕಟ್ಟೆ ಕೆಟ್ಟೆ, ಸಂಸಾರಕ್ಕಲ್ಲಾ ಪಾರಮಾರ್ಥಕ್ಕಲ್ಲಾ ಎರಡಕ್ಕೆ ಬಿಟ್ಟ ಕರುವಿನಂತೆ' ಎಂಬಲ್ಲಿ ಅವಳ ಸಂದಿಗ್ದ ಕಾಣುತ್ತದೆ. 'ಸಂಸಾರ ನಿಸ್ಸಾರವೆಂದು ತೋರಿದನೆನಗೆ ಶ್ರೀಗುರು', 'ಹಿಂದಣ ಜನ್ಮವ ತೊಡೆದು, ಮುಂದಣ ಪಥವ ತೋರಿದನೆನ್ನ ತಂದೆ' ಎಂಬ ಸಾಲುಗಳು ಭವವನ್ನು ಗೆದ್ದು, ಚೆನ್ನನನ್ನು ಸೇರಲು ದಾರಿ ಒದಗಿದುದನ್ನು ಸ್ಮರಿಸುವಂತಿದೆ. ಮಾಯೆಯ ಕಾಡುವಿಕೆಗೆ ಅಂಜಿ 'ಕಾಯಯ್ಯಾ ಶಿವಧೋ' ಎಂದು ಗೋಗರೆಯುತ್ತಾಳೆ. ನಶ್ವರವಾದ ತಾನು ಬಯಲಿನಂತೆ ವಿಸ್ತಾರವಾದ ದೈವವನ್ನು 'ನಿಮ್ಮನಾವ ಪರಿಯಲಿ ನಾ ನೆನೆವೆನಯ್ಯಾ? ಎನ್ನ ಮಾಯುವನು ಮಾಣಿಸಯ್ಯಾ' ಎಂದು ಬೇಡುತ್ತಾಳೆ. ಅಮೂರ್ತದಲ್ಲಿ ದೇಹ ದಂಡನೆಯ ಮೂಲಕ ನಡೆಸುವ ಹುಡುಕಾಟದಲ್ಲೇ ಪರಮಾನಂದವನ್ನು ಕಾಣುವುದು 'ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವಾ' ವಚನದಲ್ಲಿದೆ. ಜನ್ಮಜನ್ಮಾಂತರಗಳ ನೋವಿನ ಪ್ರತೀಕ ಈ ವಚನ. ನೋವನ್ನು ಕಟ್ಟಿಕೊಂಡು ಕ್ಷಣಕ್ಷಣಕ್ಕೂ ಕ್ಷೀಣಿಸುತ್ತಿರುವುದು 'ತರಣಿಯ ಹುಳು ತನ್ನ ಸ್ನೇಹದಿಂದ' ವಚನ ತನ್ನ ಅದಮ್ಯ ಬಯಕೆಯ ದುರಾಸೆಯನ್ನು, ಅದನ್ನು ಶಿವ ಮನ್ನಿಸಬೇಕೆಂಬ ಕೋರಿಕೆಯನ್ನು ಒಳಗೊಂಡಿದೆ. 'ಹಸಿವಾದೊಡೆ ಊರೊಳಗೆ ಭಿಕ್ಷಾನ್ನಗಳುಂಟು' ವಚನವು ಅಕ್ಕ ಎಂಥ ಘೋರ ಶಿಕ್ಷೆಗೂ ಸಿದ್ಧ ಎಂಬುದನ್ನು ಹೇಳುತ್ತದೆ. ಅಣುಅಣುವಾಗಿ ತನ್ನ ಕೊನೆ ಬರಲಿ ಅಲ್ಲಿಯವರೆಗೆ ತಾನು ದೈವದ ನೆನಪಿನಲ್ಲಿರಲಿ ಎಂಬ ಆಶಯವು ಅವಳ 'ಮನೆ ಮನೆದಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯಾ, ಬೇಡಿದೊಡೆ ಇಕ್ಕದಂತೆ ಮಾಡಯ್ಯಾ....'ವಚನ ಹೇಳುತ್ತದೆ. ಪ್ರಕೃತಿ ತಿರುಗಿ ಬಿದ್ದರೂ ತನ್ನ ಪ್ರಾಣ ದೈವಕ್ಕೆ ಅರ್ಪಿತ ಎಂಬ ಸಮಚಿತ್ತ ಅವಳ ಆಧ್ಯಾತ್ಮಿಕ ಶಕ್ತಿಗೆ ಸಾಕ್ಷಿ.'ಬೆಟ್ಟದ ಮೇಲೊಂದು ಮನೆಯ ಮಾಡಿ...' ವಚನವು ಅವಳ ಸ್ಥೈರಣೆಯ ಕುರುಹಿನಂತಿದೆ. ತನ್ನ ಮೂಕವೇದನೆಯನ್ನು ಪ್ರಾಣಿ–ಪಕ್ಷಿಗಳಿಗೆ ನಿವೇದಿಸುವ 'ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೇ, ನೀವು ಕಾಣಿರೇ' ವಚನವು ಎಂಥ ಕಲ್ಲು ಮನಸ್ಸನ್ನೂ ಕಲಕುವಂಥದ್ದು. ಅವಳ ನೋವಿನ ಪರಿಕಲ್ಪನೆ ಅನೂಹ್ಯವಾದುದು ಎಂಬುದಕ್ಕೆ "ಬಂಜೆ ಬೇನೆಯರಿವಳೇ? ಬಲತಾಯಿ ಮುದ್ದಬಲ್ಲಳೇ?" ವಚನವು ಅವಳ ಪ್ರೀತಿ, ವಿರಹಗಳ ಅಗಾಧತೆಯನ್ನು ಹೇಳುತ್ತದೆ.

ಚನ್ನಮಲ್ಲಿಕರ್ಜುನನಲ್ಲಿ ಬೆರೆತು ಬಯಲಾಗಬೇಕೆಂಬ ಅವಳ ಭಾವ, ಶರಣರ ಸಂಗದಿಂದ ಅಗಲುವ ನೋವನ್ನು ತಾಳಿಕೊಳ್ಳುವಂತದ್ದು. ಅಲ್ಲಮನಿಗೆ 'ನಿಮ್ಮ ಮಂಡೆಗೆ ಹೂವ ತಾರೆನಲ್ಲದೆ ಹುಲ್ಲತಾರೆ' ಎಂದು ಹೇಳಿ ಮಹಾಗಿರಿಗೆ ಹೊರಡುತ್ತಾಳೆ. ಇಲ್ಲಿ ತನ್ನ ಶ್ರೇಯಸ್ಸಿಗಿಂತ ಶರಣರ ಹೆಸರಿಗೆ ಕಳಂಕ ತನ್ನಿಂದ ಒದಗಲಾರದು ಎಂಬ ಆಶ್ವಾಸನೆ ನೀಡುವ, ಅದನ್ನು ಅವಳಿಂದ ನಿರೀಕ್ಷಿಸುವ ಸಮಾಜ ಪ್ರಶ್ನಾರ್ಹವೆನಿಸುತ್ತದೆ. ಶ್ರೀಗಿರಿಯೇರುವಾಗ ಅಕ್ಕನಿಗೆ 'ವನವೆಲ್ಲ ನೀವೆ, ವನದೊಳಗಣ ದೇವತರುವೆಲ್ಲ ನೀವೆ, ತರುವಿನೊಳಗಾಡುವ ಖಗಮೃಗವೆಲ್ಲ ನೀವೆ, ಚೆನ್ನಮಲ್ಲಿಕಾರ್ಜುನ ಸರ್ವಭರಿತವಾಗಿ ಎನಗೇಕೆ ಮುಖದೋರೆ? ಎನ್ನುವ ಕಳವಳ ಅವಳ ಅಂತರಂಗಕ್ಕೆ ಹಿಡಿದ ನಿಕಷದಂತಿದೆ. ಲೌಕಿಕದಲ್ಲಿದ್ದೂ ಅಲೌಕಿಕದ ಹಂಬಲದಲ್ಲೇ ತೊಳಲಿದ ಜೀವದಂತೆ ಕಾಣುತ್ತಾಳೆ. 'ಗಂಡ ಗಂಡರೆಲ್ಲರ ಹೆಂಡಿರಾಗಿ ಆಳುವ

**International Journal of Research in Economics and Social Sciences(IJRESS)**
Available online at http://euroasiapub.org/journals.php
Vol. 6 Issue 11, November 2016
ISSN: 2249-7382 Impact Factor: 6.225 | Thomson Reuters ID: L-5236-2015

ಗರುವನ ಕಂಡೆ, ನಾನು ಜಗದಾದಿ ಶಕ್ತಿಯೊಳು ಬೆರೆಸಿ ಮಾತಾಡುವ ಪರಮಗುರು ಚನ್ನಮಲ್ಲಿಕಾರ್ಜುನನ ನಿಲುವು ಕಂಡು ಬದುಕಿದೆನು' ಎನ್ನುವಲ್ಲಿ ಶರಣ ಸತಿ ಲಿಂಗ ಪತಿಯ ಭಾವ, ತನ್ನ ಪರಿಶ್ರಮದ ಸಾರ್ಥಕ ನಿಲುವು ಕಾಣುತ್ತದೆ. ಕದಳಿಯ ವನದಲ್ಲಿ ಚನ್ನಮಲ್ಲಿಕಾರ್ಜುನನಲ್ಲಿ ಒಂದಾಗುವ ಅಕ್ಕ ಸತಿ–ಪತಿ ಭಾವಕ್ಕೆ ಮೀರಿದ, ನಿಲುಕದ ಸಂಬಂಧವನ್ನು ಶಿವನೊಡನೆ ಸಾಧಿಸಿರುತ್ತಾಳೆ. 'ಕದಳಿಯ ಬನದಲ್ಲಿ ಭವಹರನ ಕಂಡೆನು.ಭವಗೆಟ್ಟು ಬಂದ ಮಗಳೆಂದು ಕರುಣದಿಂ ತೆಗೆದು ಬಿಗಿಯಪ್ಪಿದರೆ ಚನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು'. ಈ ಅಡಗುವಿಕೆ ಸುರಕ್ಷ ಭಾವದ ಜೊತೆ, ಜಗದ ಜಂಜಡಗಳಿಂದ ಪಡೆದ ಮುಕ್ತಿಯೂ ಹೌದು, ತನ್ನ ಗುರಿ–ಗಮ್ಯವನ್ನು ಮುಟ್ಟಿದ ಗೆಲುವೂ ಹೌದು. ಆತನೇ ಸರ್ವಸ್ವ,.ಪರಮ ಪತಿವ್ರತೆಗೆ ಗಂಡನೊಬ್ಬನೇ ಎಂಬಂತೆ 'ಇಹಕೊಬ್ಬ ಗಂಡನೇ? ಪರಕೊಬ್ಬ ಗಂಡನೇ? ಲೌಕಿಕಕ್ಕೊಬ್ಬ ಗಂಡನೇ? ಪಾರಮರ್ಥಕ್ಕೊಬ್ಬ ಗಂಡನೇ? ನನ್ನ ಗಂಡ ಚನ್ನಮಲ್ಲಿಕಾರ್ಜುನ ದೇವರಲ್ಲದೆ ಮಿಕ್ಕನ ಗಂಡರೆಲ್ಲ ಮುಗಿಲಮರೆಯ ಬಣ್ಣದ ಬೊಂಬೆಯಂತೆ' ಎಂಬ ಉದಾಸೀನ ನಿಲುವನ್ನು ಲೋಕದ ಮಟ್ಟಿಗೆ ಹೊಂದಿದವಳು. ಅಲೌಕಿಕ ವಿರಹದ ಬೇಗೆಯಲ್ಲಿ ಬೆಂದು 'ಅಳಿ ಸಂಕುಳವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ ನಿಮ್ಮನಿಮ್ಮೆಲ್ಲರನು ಒಂದು ಬೇಡುವೆನು ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿ' ಎಂಬ ಆರ್ತತೆಯಲ್ಲಿ ಸದಾ ಮುಳುಗಿರುವವಳು. ಅವಳಲ್ಲಿ ಕಾಮಾತುರತೆಯೂ ತೀವ್ರವಾಗಿದೆ. 'ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆ' ಎನ್ನುವಲ್ಲಿ ಅವಳ ಪತಿಯ ಕುರುಹಿನ ಜೊತೆಗೆ ಆತನ ಘನತೆಯನ್ನು ಹೇಳುತ್ತಾಳೆ. ಯಾವುದೇ ಬಂಧನವಿಲ್ಲದವನ ಬಂಧನಕ್ಕೆ ಒಳಗಾದ ತೃಪ್ತಿಯಿದೆ. ಅವನ ನಿರೀಕ್ಷೆ ಇಹದ ಬದುಕಿನಂತೆ ತೋರುತ್ತದೆ. 'ಬಂದಹನೆಂದು ಬಟ್ಟೆಯ ನೋಡಿ, ಬಾರದಿದ್ದರೆ ಕರಲಿ ಕರಲಿ ಕೊರಗಿದೆನಯ್ಯಾ" ಎಂಬಲ್ಲಿ ಕಾತರತೆ, ನಿರಾಸೆ ಮಡುಗಟ್ಟಿದೆ. 'ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ' ತನ್ನೊಡೆಯನನ್ನು ನೆನೆದು ಸೇರಲು ತವಕಿಸುತ್ತಾಳೆ. ಭವದ ಮಾಯೆಯನ್ನು ಕುರಿತು ಅದರಿಂದ ಬಿಡುಗಡೆಯ ಹಂಬಲವನ್ನು ಕುರಿತು 'ರತ್ನದ ಸಂಕೋಲೆಯಾದರೆ ತೊಡರಲ್ಲವೇ? ಮುತ್ತಿನ ಬಲೆಯಾದೊಡೆ ಬಂಧನವಲ್ಲವೇ?......ಲೋಕದ ಭಜನೆಯ ಭಕ್ತಿಯಲಿ ಸಿಲಿಕಿದೊಡೆ ಜನನ ಮರಣ ಬಿಡುವುದೆ ಚನ್ನಮಲ್ಲಿಕಾರ್ಜುನ' ಎಂದು ಇಹದ ಬದುಕಿನ ಆಕರ್ಷಣೆಯಲ್ಲಿ ಅಡಗಿರುವ ಕ್ರೂರತೆಯನ್ನು ಹೇಳುತ್ತಾಳೆ. ಶಿವನನ್ನು ಸೇರಲು ಲೋಕದ ಅಸಂಖ್ಯ ಕಷ್ಟಗಳನ್ನು ಎದುರಿಸಲು ಸಿದ್ಧವಿರುವುದನ್ನು 'ಕಿಡಿಕಿಡಿ ಕೆದರಿದರೆ ಎನಗೆ ಹಸಿವು ತೃಷೆ ಅಡಗಿತ್ತೆಂಬೆನು.....ಶಿರ ಹರಿದು ಬಿದ್ದರೆ ಪ್ರಾಣ ನಿಮಗರ್ಪಿತವೆಂಬೆನು' ಎನ್ನುವಲ್ಲಿ ಅವಳ ದೃಢನಿರ್ಧಾರ ಕಾಣುತ್ತದೆ. ದೇವರೇ ನಡುಗುವ ಮನೋಬಲ ಅಕ್ಕನಲ್ಲಿದೆ. ತಾನು ಕನಸು ಮನಸಿನಲ್ಲಿ ಹಂಬಲಿಸಿದವನೊಡನೆ ಅಮೂರ್ತ ಮದುವೆಯಾಗಿವಿಕೆಯನ್ನು ಲೋಕಾಚಾರದ ರೀತಿಯಲ್ಲಿ 'ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ.....ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆ ಮಾಡಿದರು' ಎನ್ನುತ್ತಾಳೆ. ಅದು ಅವಳ ಶಾಶ್ವತ, ಆಧ್ಯಾತ್ಮದ ಬದುಕಾಗುತ್ತದೆ. ಅವಿನಾಭಾವ ಸಂಬಂಧವನ್ನು ಹೊಂದುವಿಕೆ 'ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ ನಲ್ಲನ ಒಡಗೂಡಿ ಸುಖಿಯಾದೆ ಕೇಳಿರಯ್ಯಾ, ಓಸರಿಸೆನನ್ಯಕೆ ಆಶೆಮಾಡೆನು ಭಿನ್ನಸುಖಕೆ'

ಎಂಬ ವಚನದಲ್ಲಿದೆ. 'ಲಿಂಗವ ಲಿಂಗಮುಖದಲಿ ಅರ್ಪಿಸಿ ಅಂಗವನಂಗವಾಯಿತು ...ಶರಣ ಸತಿ ಲಿಂಗ ಪತಿಯಾದೆನು ಇದ ಕಾರಣ ಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರೆಸಿದೆನು. ' ಎಂಬುದು ಅವಳ ಅಸ್ತಿತ್ವ ಲಿಂಗದೊಡಗೂಡಿ ಬೆರೆಸಿ ಬೇರಿಲ್ಲದಾದಂತ, ಉರಿಕೊಂಡ ಕರ್ಪೂರದ ಸ್ಥಿತಿಯನ್ನು ಮುಟ್ಟುತ್ತದೆ. ಅಕ್ಕನ ವಿವಾಹದ ಕಲ್ಪನೆ, ಕನಸುಗಳು, ಲೈಂಗಿಕ ತೃಪ್ತಿಯ ಅಭಿವ್ಯಕ್ತಿ ಹೊಸ ಬಗೆಯಲ್ಲಿ ಬದುಕನ್ನು ನೋಡುವ ಪರ್ಯಾಯವನ್ನು ಹೇಳುತ್ತದೆ.

ಅಕ್ಕನ ವಚನಗಳು ಶುಷ್ಕ ನೀತಿಬೋಧೆಯಾಗದೆ ಆಕೆಯ ಅಂತರಾಳದ ಆಭಿವ್ಯಕ್ತಿಯಾಗಿದೆ. ಅವಳ ಜೀವನವೇ ಮಹತ್ ಕಾವ್ಯ.ಚನ್ನ ಮಲ್ಲಿಕಾರ್ಜುನನಿಗಾಗಿ ಪಟ್ಟ ಬವಣೆ ಸುಂದರ ವಚನಗಳಲ್ಲಿ ಮೂಡಿದೆ. ಭಕ್ತೆಯಾಗಿ, ಹೆಣ್ಣಾಗಿ, ವಿರಹಿಯಾಗಿ, ಸತಿಯಾಗಿ ಹತ್ತು ಹಲವು ಮಗ್ಗಲುಗಳಲ್ಲಿ ಅವಳ ಆತ್ಮನಿವೇದನೆ ಕಾಣುತ್ತದೆ. 'ಸಾವ ಕೆಡುವ ಗಂಡರನ್ನೊಯ್ದು ಒಲೆಯೊಳಗಿಕ್ಕು' ಎನ್ನುತ್ತಲೇ ಶಾಶ್ವತ ಗಂಡನಿಗಾಗಿ ಉರಿಯಿಲ್ಲದ ಬೇಗೆಯಲ್ಲಿ ಬೇಯುತ್ತಾಳೆ. ಹಸಿವು, ತೃಷೆ, ನಿದ್ರೆ, ಅರಿಷಡ್ವರ್ಗಗಳು, ಸಚರಾಚರಗಳಿಗೆ ತನ್ನನ್ನು ಕಾಡದೆ ದೂರ ನಿಲ್ಲಿ ಎನ್ನುತ್ತಾ, 'ನಾನು ಚನ್ನಮಲ್ಲಿಕಾರ್ಜುನ ದೇವರ ಅವಸರದ ಒಲೆಯನೊಯುತ್ತಲಿದ್ದೇನೆ ಶರಣಾರ್ಥಿ' ಎಂಬ ಬೇಗುದಿ ಕಾಣುತ್ತೇವೆ. ಆತ್ಮ ಸಂಯಮದ ಅಗತ್ಯವನ್ನು ಕುರಿತಂತೆ 'ಚಂದನವ ಕಡಿದು ಕೊರೆದು ತೇದೊಡೆ....ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿ ಎನ್ನ ತಂದೆ ಚನ್ನಮಲ್ಲಿಕಾರ್ಜುನ ದೇವಯ್ಯಾ ಕೊಂದಡೆ ಶರಣೆಂಬುದ ಮಾಣೆ' ಎನ್ನವಲ್ಲಿ ಶಿವನಲ್ಲದೆ ತನಗೆ ಬದುಕಿಲ್ಲ, ಸಾವಿಗೂ ಅಂಜದ ಸದೃಢ ಚಿತ್ತ, ಸಂಯಮ ಗೋಚರಿಸುತ್ತದೆ. ಆಕೆ ರಚಿಸಿರುವ ತ್ರಿವಿದಿಗಳಲ್ಲಿ ಕೂಡಾ ಲಿಂಗಾಂಗ ಸಾಮರಸ್ಯ, ಶಿವಯೋಗದ ಪ್ರಾಧಾನ್ಯತೆ ಕಾಣಿಸುತ್ತದೆ. ಮುಕ್ತಿ ಹೊಂದಲು ಸನ್ಯಾಸಿಯೇ ಆಗಬೇಕಿಲ್ಲ, ಶಿವನಲ್ಲಿ ಸಮರ್ಪಣಾ ಭಾವವಿದ್ದರೆ ಸಾಕು ಎನ್ನುತ್ತಾಳೆ. 'ನಡೆವ ಲಿಂಗದ ಕೂಡ, ನುಡಿವೆ ಲಿಂಗದ ಒಡನೆ ಎಡೆಬಿಡದೆ ಬರ್ಪ ವಿಷಯಭೋಗಗಳನ್ನು ಕೊಡುವೆನ್ನೆ ಲಿಂಗಮುಖದಿಂದ' ತಾನು ಅನುಭವಿಸುವ ಭೋಗ ತನ್ನ ಒಡಲಿಗಾದರೆ ತನ್ನನ್ನು 'ನರಕದಾ ಬಾವಿಯೊಳಗದ್ದಿ ತೆಗೆಯಯ್ಯಾ' ಎನ್ನುವಲ್ಲಿ ಅವಳ ಲಿಂಗನಿಷ್ಠೆಯ ಪರಾಕಾಷ್ಠತೆ ಕಾಣುತ್ತದೆ. 'ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡು ರೂಪ' ಎಂಬಂತೆ ಸಾರ್ಥಕ, ದಿಟ್ಟ ಬದುಕನ್ನು ಬಾಳಿದವಳು. ಕೇವಲ ೩೪೦ ವಚನಗಳು ಅಕ್ಕನಿಂದ ರಚಿತವಾಗಿದೆ ಎಂದು ಆರ್.ಸಿ.ಹಿರೇಮಠ್ ಹೇಳಿರುವುದನ್ನು ಗಮನಿಸಿದಾಗ ತನ್ನ ಸ್ವಾನುಭವದಿಂದ, ತಾನೇರಿದ ನಿಲುವಿನಿ ಮಹಿಮೆಯಿಂದ, ಅರಿವಿನ ಆಳದಿಂದ ಮೂಡಿರುವ ಆಧ್ಯಾತ್ಮಿಕ ಗದ್ಯ ಕಾವ್ಯಗಳ ಸಮ್ಮಿಳನದಿಂದ ಅವು ರಚನೆಗೊಂಡಿರುವುದು ಸತ್ಯ. ಇದು ಅವಳ ಆತ್ಮಶ್ರೀಗೆ ಹಿಡಿದ ಕನ್ನಡಿಯಂತಿದೆ. ಆಕೆಯ ನಿಲುವು ದೃಢಸಂಕಲ್ಪದ ಆದರ್ಶಸತಿಯ ಮಾದರಿಯದು.ತನ್ನ ನೋವಿಗೆ ನೀಡಿದ ಕಲಾತ್ಮಕ ಅಭಿವ್ಯಕ್ತಿಯಾಗಿ ವಚನಗಳು ಮೈತಾಳಿವೆ.

**International Journal of Research in Economics and Social Sciences(IJRESS)**
Available online at http://euroasiapub.org/journals.php
Vol. 6 Issue 11, November 2016
ISSN: 2249-7382 Impact Factor: 6.225 | Thomson Reuters ID: L-5236-2015

## ಪರಾಮರ್ಶನ ಕೃತಿಗಳು

೧. ಅಕ್ಕನ ವಚನಗಳು: ಸಂ, ಡಾ,ಎಲ್. ಬಸವರಾಜ್: ಪಂಚಮ ಸಂಸ್ಕರಣ–೧೯೯೦: ಗೀತಾಬುಕ್ ಹೌಸ್: ಮೈಸೂರು

೨. ಸ್ತ್ರೀಮತವನುತ್ತರಿಸಲಾಗದೇ?: ಎಂ.ಎಸ್.ಆಶಾದೇವಿ: ಅಕ್ಷರಪ್ರಕಾಶನ: ಹೆಗ್ಗೋಡು–೨೦೦೬

೩. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ: ಸಂಪುಟ–೩, ಭಾಗ–೧, ಸಂ: ಡಾ.ಸಿ.ಬಿ.ಹೊನ್ನು ಸಿದ್ಧಾರ್ಥ, ಪ್ರಸಾರಾಂಗ, ಬೆಂ.ವಿ.ವಿ. ೨೦೧೪.

೪. ಸಾಹಿತ್ಯ ವಿಮರ್ಶೆ ೧೯೯೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂ:ಡಾ.ಜಿ.ಎಂ. ಹೆಗಡೆ, ೧೯೯೯.

೫. ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ,ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ,ದ್ವಿ.ಮು.–೨೦೦೬.